**ಕರ್ನಾಟಕ ಸರ್ಕಾರ**
**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ,**
**ದ್ವಿತೀಯ ಪಿ.ಯು.ಸಿ ಪೂರಕ ಪರೀಕ್ಷೆ ಮೇ/ಜೂನ್–2023**
**ಮಾದರಿ ಉತ್ತರಗಳು**

**ವಿಷಯ– ಐಚ್ಛಿಕ ಕನ್ನಡ** **ಸಂಕೇತ–16**

**ಅ–ವಿಭಾಗ**

**I.ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆಯಿರಿ.** **15*1=15**

1. ಇ) ಸಾಲ
2. ಈ) ಅನಲ, ಬೆಂಕಿ
3. ಅ) ರೀತಿ, ಮನಸ್ಸು
4. ಇ) ಸೊಗ
5. ಅ) ಬಯಲಿನ+ಅಂಚಿಗೆ
6. ಅ) ದೆಸೆದೆಸೆಗೆ
7. ಆ) ಅಸುರ
8. ಅ) ಉರುದಂಡ
9. ಅ) ಮಾಯೆ
10. ಆ) ನದಿ
11. ಅ) ಕುಲಪುತ್ರಿ
12. ಈ) ಜಲಗಾರ
13. ಅ) ಮತ
14. ಆ) ಜಲಗಾರ
15. ಅ) ನೆನಪಿನ ದೋಣಿಯಲ್ಲಿ

**II. ಹೊಂದಿಸಿ ಬರೆಯಿರಿ.** **5*1=5**

16. ಪಕ್ಷಿ
17. ನಯನ
18. ಋಷಿ
19. ಹೊಗಳು
20. ಸ್ಮಶಾನ

**III. ಒಂದು ವಾಕ್ಯದ ಉತ್ತರ** **10*1=10**

21. ನೀಲಾಂಜನೆ
22. ಅರ್ಜುನ
23. ಮಡಕೆ
24. ಕಾಳುಮತಿಗಳಿಗೆ
25. ಗುರು
26. ಸಿಂದಿ ಸೇವಿಸುವವನು (ಕುಡುಕ)
27. ಕಣ್ಣು ಕಾಣದ ಗಾವಿಲರು
28. ಸೀರೆ ಮಾರುವವನು
29. ರೈತ
30. ಶಿವ

## ಆ –ವಿಭಾಗ

**IV. ಎರಡು ಮೂರು ವಾಕ್ಯಗಳ ಉತ್ತರ** **4*2=8**

**31.** ನೆತ್ತರು ಬಾಯಿ ಮತ್ತು ಮೂಗಿನ ಹೊಳ್ಳೆಗಳಿಂದ ಹೊರಹೊಮ್ಮಿತು.
**32.** ಬ್ರಹ್ಮನ ಶಿರಬೊಬ್ಬೆ ಇಟ್ಟಿತು. ಸುರರ ಶಿರೋಮಾಲೆಗಳು ಉಲಿದವು.
**33.** ಆನೆ ಕಬ್ಬನ್ನು ಪೂರ್ಣವಾಗಿ ತಿಂದರೆ ಕುರಿಗಳು ಮೇಲಿನ ಎಲೆ ತಿಂದು ಅಲ್ಪತೃಪ್ತಿ ಪಡುತ್ತವೆ.
**34.** ಆಡಿ ಮಾಡುವವನು ಮಧ್ಯಮ. ಆಡಿಯೂ ಮಡುವವನು ಅಧಮ.
**35.** ಹದ್ದು, ಹಾವು, ಎದ್ದೆದ್ದು ಬರುವ ನಾಯಿ, ಹುತ್ತದ ಗೊದ್ದ.
**36.** ಯೌವನದಲಿ ಕಂಡಂತೆ ಪ್ರೀತಿಯಿಂದ ನೋಡಿಕೊಳ್ಳಬೇಕು.

**V. ಸಂದರ್ಭ–ಸ್ವಾರಸ್ಯ** **3*3=9**

**37.** ಪಂಪ–ಆದಿಪುರಾಣ–ಪೊಸಯಿಸಿದಳಾಕೆ ನಾಟ್ಯಾಗಮಮಂ
ನೀಲಾಂಜನೆ ಅದೃಶ್ಯಳಾದ ಸಂದರ್ಭ– ಆದಿನಾಥನ ವೈರಾಗ್ಯದ ಸನ್ನಿವೇಶ
**38.** ಹರಿಹರ–ಕುಂಬಾರ ಗುಂಡಯ್ಯನ ರಗಳೆ–ಆಡಿದನಾಡಿದನಾಹಾ ಶಂಕರ
ಶಿವನು ಗಿರಿಜೆಯ ಬಳಿ ಆಡಿದ ಮಾತು–ಶಿವನು ಗುಂಡಯ್ಯನ ಮಡಕೆಯ ನಾದಕ್ಕೆ ಮೈ ಮರೆತ ಸಂದರ್ಭ
**39.** ಚಾಮರಸ–ಪ್ರಭುಲಿಂಗ ಲೀಲೆ–ಕಾಳುಮತಿಗಳಿಗೆನಿತು ಬುದ್ಧಿಯ ಹೇಳಿದಡೆ ಫಲವೇನು?
ಮಾಯೆಯು ಅಲ್ಲಮನ ಬಳಿ ಹೇಳಿದ ಮಾತು–ಮಾಯೆಯು ತನ್ನ ಪ್ರೇಮವನ್ನು ಅಲ್ಲಮನ ಬಳಿ ವ್ಯಕ್ತಪಡಿಸುವ ಸಂದರ್ಭ.
**40.** ಸರ್ವಜ್ಞ–ಸರ್ವಜ್ಞನ ವಚನಗಳು–ಹಸನಾಗಿ ದುಡಿದರೆ ಅಶನ ವಸನಗಳು
ಸರ್ವಜ್ಞನ ಮಾತುಗಳು– ಸರ್ವಜ್ಞ ದೇವರ ಇರುವಿಕೆ ಬಗ್ಗೆ ಆಡಿದ ಮಾತುಗಳು.
**41.** ಸಂಚಿಯ ಹೊನ್ನಮ್ಮ–ಹದಿಬದೆಯ ಧರ್ಮ–ನೇಮದೊಳು ನೆಲಸುವುದು
ಸಂಚಿಯ ಹೊನ್ನಮ್ಮ ಹೆಣ್ತನದ ಹಿರಿಮೆಯ ಬಗ್ಗೆ ಆಡಿದ ಮಾತು.

**VI. ವಿವರವಾದ ಉತ್ತರ** **2*4=8**

**42.** ಕಿರಾತಾರ್ಜುನ ಪ್ರಸಂಗವು ಅರ್ಜುನನಿಗೆ ತನ್ನ ಪರಾಕ್ರಮದ ಬಗ್ಗೆ ಇದ್ದ ಅಹಂಕಾರವನ್ನು ಸಾಕ್ಷಾತ್ ಶಿವನೇ ಕಿರಾತನ ವೇಷದಲ್ಲಿ ಬಂದು ದಮನ ಮಾಡಿದ ಕಥೆಯನ್ನು ನಿರೂಪಿಸುತ್ತದೆ. ಶಿವನಲ್ಲಿ ಅರ್ಜುನನಿಗೆ ಅಪಾರವಾದ ಭಕ್ತಿಯಿತ್ತು. ಆದರೆ ಅದೇ ರೀತಿ ತನ್ನ ಪರಾಕ್ರಮದ ಬಗೆಗೂ ಅಪರಿಮಿತವಾದ ಅಹಂಕಾರವಿತ್ತು. ತನ್ನನ್ನು ಎದುರಿಸುವವರು ದೇವಾಸುರರಲ್ಲಿ ಯಾರಿಲ್ಲವೆಂಬ ಗರ್ವ ಆತನದ್ದಾಗಿತ್ತು. ಈ ಅಹಂಕಾರವನ್ನು ದೂರಮಾಡಿ ಅರ್ಜುನನಿಗೆ ಅನುಗ್ರಹಿಸುವ ಸಲುವಾಗಿ ಲೀಲಾಪ್ರಿಯನಾದ ಶಿವನು ಈ ಸನ್ನಿವೇಶವನ್ನು ಸೃಷ್ಟಿಸುತ್ತಾನೆ.

ಈ ಪ್ರಸಂಗದಿಂದ ನಮಗೆ ವಿದ್ಯಾವಂತನಿಗೆ ವಿನಯವೇ ಭೂಷಣ ಎಂಬ ಸಂದೇಶ ಲಭಿಸುತ್ತದೆ. ವ್ಯಕ್ತಿಗೆ ಬರೀ ಸಾಮರ್ಥ್ಯವಿದ್ದರೆ ಸಾಲದು ಸೌಜನ್ಯ ಇರಬೇಕು. ವಿದ್ಯೆಗೆ ತಕ್ಕ ವಿನಯವಿದ್ದರೆ ಸುವರ್ಣ ಪುಷ್ಪಕ್ಕೆ ಸುಗಂಧ ಪೂಸಿದಂತಿರುತ್ತದೆ. ಅಲ್ಲದೇ ಲೋಕದಲ್ಲಿ ಒಬ್ಬರಿಗಿಂತ ಮತ್ತೊಬ್ಬರು ಪರಾಕ್ರಮಿಗಳು, ವಿದ್ಯಾವಂತರು ಇರಬಹುದು. ಲೋಕಕ್ಕೆಲ್ಲಾ ತಾನೇ ಮೇಲು ಎಂಬ ಅಹಂಕಾರವು ನಮ್ಮ ನಾಶಕ್ಕೆ ಕಾರಣವಾಗುತ್ತದೆ. ಸೌಜನ್ಯವಿದ್ದರೆ ಲೋಕ ಗೌರವಿಸುತ್ತದೆ ಎಂಬ ಸಂಗತಿಗಳನ್ನು ಈ ಪ್ರಸಂಗದಿಂದ ಅರ್ಥಮಾಡಿಕೊಳ್ಳಬಹುದು. ಇದೇ ಈ ಕಥಾನಕದ ಮುಖ್ಯ ಸಂದೇಶ.

**43.** ತನ್ನ ಕಾಯಕದಿಂದಲೇ ಶಿವನನ್ನು ಒಲಿಸಿಕೊಂಡ ಭಕ್ತಮಹಾಶಯರಲ್ಲಿ ಕುಂಬಾರನಾದ ಗುಂಡಯ್ಯನೂ ಒಬ್ಬನಾಗಿದ್ದಾನೆ. ಈತ ಬಲ್ಲುಕೆಪುರದಲ್ಲಿ ವಾಸವಾಗಿದ್ದನು. ಮಣ್ಣಿನ ಮಡಕೆ ಮಾಡುವುದು ಈತನ ಬಹಿರಂಗದ ಕಾಯಕವಾಗಿತ್ತು. ಅಂತರಂಗದಲ್ಲಿ ಶಿವನನ್ನು ಆರಾಧಿಸುವ ಮಹಾನುಭಾವ ಈತನಾಗಿದ್ದನು. ಈತ ತನ್ನ ಕಾಯಕದ ಮೂಲಕವೇ ಶಿವನನ್ನು ಪೂಜಿಸುತ್ತಿದ್ದನು. ಈತನಿಗೆ ತನ್ನ ಕುಂಬಾರಿಕೆಯ ಚಕ್ರದ ಮೊಳೆಯೇ ವೇಧೆಯಾಗಿತ್ತು. ಆ ಚಕ್ರವೇ ಷಟ್ಚಕ್ರವಾಗಿತ್ತು. ಮಣ್ಣೇ ತನ್ನ ಕನಸಿನ ಶಿವನ ದೇಹವಾಗಿತ್ತು. ಶಿವನ ನೆನಪೇ ಚಟೆದಾರಗಳಾಗಿದ್ದವು. ಗಾಲಿ ತಿರುಗಿಸಲು ಬಳಸುವ ಊರುಗೋಲೇ ಆತನ ಶಿವನಿಷ್ಠೆಯಾಗಿತ್ತು. ಆತನ ಶಿವಭಕ್ತಿಯೇ ಕಟಾಹವಾಗಿತ್ತು. ತನ್ನ ಶೋಷಣೆಯ ತಪದಿಂದ ಆರಿಸಿ ಉದರಾಗ್ನಿಯಿಂದಲೇ ಬೇಯಿಸಿದ ಮಡಕೆಗಳನ್ನು ಶಿವಭಕ್ತರಿಗೆ ನೀಡುತ್ತಾ ಆತ ಆನಂದದಿಂದ ಇದ್ದನು.

ಹೀಗೆ ಅಂತರಂಗದಲ್ಲಿ ಶಿವಪೂಜೆ ಮಾಡುತ್ತಾ ಬಹಿರಂಗದಲ್ಲಿ ತನ್ನ ಘಟಕಾಯಕ ಮಾಡುತ್ತಿದ್ದ ಗುಂಡಯ್ಯನು ಒಮ್ಮೆ ಶಿವಾಲಯಕ್ಕೆ ಭೇಟಿ ನೀಡುತ್ತಾನೆ. ಅಲ್ಲಿ ಶಿವನನ್ನು ಸಿಂಗರಿಸಿದ ಬಗೆಯನ್ನು ಮತ್ತು ಶಿವನಿಗೆ ಮಾಡುತ್ತಿದ್ದ ನಾನಾ ವಿಧವಿಧದ ಪೂಜೆಗಳನ್ನು ಅಚ್ಚರಿಯಿಂದ ನೋಡುತ್ತಾನೆ. ಆತನ ಕಣ್ಣಲ್ಲಿ ಮತ್ತು ಮನದಲ್ಲಿ ಪೂಜಾಭಾವ ತುಂಬಿಕೊಳ್ಳುತ್ತದೆ. ಈ ಸ್ಥಿತಿಯಲ್ಲಿಯೇ ಆತ ಮನೆಗೆ ಹಿಂತಿರುಗಿ ತನ್ನ ಮಡಕೆಯ ಕಾಯಕದಲ್ಲಿ ನಿರತನಾಗುತ್ತಾನೆ. ಆಗ ಆತನ ಮನದಲ್ಲಿ ನಾನಾವಿಧದ ಪೂಜೆಗಳಿಗೆ ಶಿವನು ನಲಿದಾಡಿದಂತೆ ಭಾಸವಾಗಿ ತನ್ನ ಮಡಕೆಗಳನ್ನೇ ವಾದ್ಯಗಳನ್ನಾಗಿಸಿ ಬಾರಿಸಲಾರಂಭಿಸುತ್ತಾನೆ. ಹೀಗೆ ಬಾರಿಸುತ್ತಾ ತಾನು ಕುಣಿಯುತ್ತಾ ತನ್ನ ಅಂತರಂಗದಲ್ಲಿನ ಶಿವನನ್ನು ಕುಣಿಸತೊಡಗುತ್ತಾನೆ.

ಗುಂಡಯ್ಯನ ಭಕ್ತಿಗೆ ಮತ್ತು ಮಡಕೆಯ ನಾದಕ್ಕೆ ಮನಸೋತ ಶಿವನು ಕೈಲಾಸದಿಂದ ಗಿರಿಜಾಸಮೇತನಾಗಿ ಭೂಲೋಕಕ್ಕೆ ಬರುತ್ತಾನೆ. ಗುಂಡಯ್ಯನ ಜೊತೆಗೇ ಕುಣಿದು ಆತನನ್ನು ತನ್ನೊಂದಿಗೆ ಕೈಲಾಸಕ್ಕೆ ಕರೆದೊಯ್ದು ಗಣಪದವಿ ನೀಡುತ್ತಾನೆ. ಹೀಗೆ ಗುಂಡಯ್ಯನ ಭಕ್ತಿಗೆ ಶಿವನು ಒಲಿಯುತ್ತಾನೆ.

**44.** ಸರ್ವಜ್ಞನ ವಚನಗಳ ಆಶಯವೇ ಲೋಕ ನೀತಿಯನ್ನು ಬಿತ್ತರಿಸುವುದು. ಲೋಕದ ಒಳಿತನ್ನು ಆಲೋಚಿಸುವ ಕವಿಯು ತನ್ನ ತ್ರಿಪದಿಗಳಲ್ಲಿ ಲೋಕ ನೀತಿಯನ್ನು ಸಾರಿ ಹೇಳಿದ್ದಾನೆ. ಕುಡಿತದಂತಹ ವ್ಯಸನಗಳಿಗೆ ಬಲಿಯಾದರೆ ಬದುಕು ಹಂದಿಯ ಬದುಕಿಗಿಂತ ಬಹುಹೀನ ಎಂದು ಹೇಳಿದ್ದಾನೆ. ಭಂಗಿಯನ್ನು ಸೇದುವವನನ್ನು ಮಂಗಕ್ಕೆ ಹೋಲಿಸಿದ್ದಾನೆ. ಹೀಗೆ ವ್ಯಸನಗಳಿಗೆ ತುತ್ತಾದರೆ ಬದುಕು ನಾಶವಾಗುತ್ತದೆ ಎಂಬ ಲೋಕ ನೀತಿ ವಚನಗಳಲ್ಲಿದೆ.

ಭಗವಂತನನ್ನು ಕಲ್ಲು ಮಣ್ಣಿನಲ್ಲಿ ಹುಡುಕುವುದು ಬೇಡ. ಭಗವಂತ ಮನುಷ್ಯನ ಮನಸ್ಸಿನಲ್ಲಿಯೇ ಇರುತ್ತಾನೆ ಎಂದಿದ್ದಾನೆ ಸರ್ವಜ್ಞ. ಜಾತಿಪದ್ಧತಿಯ ಬಗ್ಗೆ ಮಾತನಾಡುವ ಕವಿ ಪರರ ಒಡವೆಯನ್ನು ಅಪಹರಿಸುವವನೇ ನಿತ್ಯ ಹೊಲೆಯನೆಂದು ಹೇಳುತ್ತಾನೆ. ಅಲ್ಲದೇ ಸಾಲಕೊಡುವವನನ್ನು ಹದ್ದು, ಹಾವು, ನಾಯಿಮತ್ತು ಗೊದ್ದಕ್ಕೆ ಕವಿ ಹೋಲಿಸುತ್ತಾನೆ. ಕಚ್ಚೆ, ನಾಲಿಗೆ, ಕೈಗಳು ಶುಭ್ರವಾಗಿರಬೇಕು. ನಾವು ಊರಿನ ಜನರನ್ನೆಲ್ಲಾ ನಮ್ಮ ನೆಂಟರೆಂದು ಭಾವಿಸಬೇಕು. ಕೇರಿಯನ್ನೆಲ್ಲಾ ತನ್ನ ಬಳಗವೆಂದು ಭಾವಿಸಬೇಕು. ಧಾರಿಣಿಯನ್ನೇ ದೈವವೆಂದು ಭಾವಿಸಿದಾಗ ನಮ್ಮ ನಡುವೆ ಯಾವುದೇ ಮತಬೇಧ ಉಂಟಾಗಲು ಸಾಧ್ಯವಿಲ್ಲ ಎನ್ನುವುದು ಕವಿಯ ನಿಲುವು. ಯೋಗ್ಯರಿಗೆ ಮಾತ್ರ ದಾನ ನೀಡಬೇಕು, ಹೆಂಡತಿಯೊಂದಿಗೆ ಮನಮುಟ್ಟಿ ಬದುಕಬೇಕು.

ಇಂತಹ ಹತ್ತು ಹಲವು ಲೋಕ ನೀತಿಗಳ ನುಡಿ ಮುತ್ತುಗಳನ್ನು ಸರ್ವಜ್ಞನ ತ್ರಿಪದಿಯಲ್ಲಿ ಕಾಣಬಹುದಾಗಿದೆ.

**45.** ಮಗಳಾದವಳು ತನ್ನ ಗಂಡನ ಮನೆಯಲ್ಲಿ ಬಾಳ್ವೆ ಮಾಡುವಾಗ ಗಂಡನ ಮನೆಯವರು ತವರು ಮನೆಯವರನ್ನು ಬೈದರೆಂದು ಅವರ ಮೇಲೆ ಹಗೆ ಸಾಧಿಸದೆ ತಾಳ್ಮೆಯಿಂದ ಇರಬೇಕು, ಗಂಡನ ಮನೆಯಲ್ಲಿರುವ ಸಿರಿತನದ ಅಹಂಕಾರದಿಂದ ತನ್ನತನವನ್ನು ಮರೆತು ನಡೆಯಬಾರದು, ತನ್ನ ಜೊತೆ ಸೇರಿ ಕೆಲಸ ಮಾಡುವ ಸೇವಕರನ್ನು ತಾಳ್ಮೆಯಿಂದ ನೋಡಿಕೊಳ್ಳಬೇಕು ಎಂದು ಸತಿ ಧರ್ಮದಲ್ಲಿ ಹೇಳಿದ್ದಾರೆ.

ಏನೊಂದು ಅರಿಯದ ಎಳೆಯ ವಯಸ್ಸಿನ ಮಡದಿಯು ಅಭಿಮಾನದಿಂದ ಸ್ವಲ್ಪ ಅಹಂಕಾರವನ್ನು ತೋರಿದಾಗ ಪತಿಯಾದವನು ಅವಳ ಬಗ್ಗೆ ಮಾತ್ಸರ್ಯ ತೋರದೆ ಬಿಗುಮಾನ ತೋರದೆ ಅವಳನ್ನು ಮನ್ನಿಸಿ ಗೌರವದಿಂದ ಬದುಕು ನಡೆಸುವಂತೆ ಹೊನ್ನಮ್ಮ ಹೇಳಿದ್ದಾಳೆ.

ಹೆಂಡತಿಗೆ ವಯಸ್ಸಾದಾಗ ಆಕೆಯಲ್ಲಿ ಯಾವುದೇ ಕೊರತೆಯನ್ನು, ಲೋಪವನ್ನು ಕಾಣದೇ ಮೊದಲಿನಂತೆ ಪ್ರೀತಿಯಿಂದ ನೋಡಿಕೊಳ್ಳಬೇಕೆಂದಿದ್ದಾರೆ.

**VII. ಭಾವಾರ್ಥ** **1*4=4**

**46.** ಪಂಪ–ಆದಿಪುರಾಣ–ಪೊಸಯಿಸಿದಳಾಕೆ ನಾಟ್ಯಾಗಮಮಂ

ನೀಲಾಂಜನೆ ನೃತ್ಯದ ಸಂದರ್ಭ – ರೆಪ್ಪೆ ಮಿಟುಕಿಸದೆ ನೃತ್ಯವನ್ನು ನೋಡುತ್ತಿದ್ದ ನರರು ಮತ್ತು ಅಮರರ ಕಣ್ಣುಗಳೊಳಗೆ ನೀಲಾಂಜನೆಯು ತನ್ನ ಬಾಹುಮೂಲ ಮತ್ತು ನಾಭಿಮೂಲದಲ್ಲಿ ಮನ್ಮಥನು ಬಚ್ಚಿಟ್ಟ ಅಮೃತವನ್ನು ಸಿಂಪಡಿಸಿದಳು.

**47.** ಚಿಕ್ಕುಪಾಧ್ಯಾಯ–ರಂಗಧಾಮ ನೀತಿಶತಕ ಸಾಂಗತ್ಯ–ಕೊಲ್ವುದು ಧರ್ಮವೇ ಕಳುವುದು ನೀತಿಯೇ?

ಕವಿಯ ನೀತಿಪಾಠ–ಚಿಕ್ಕುಪಾಧ್ಯಾಯನ ಪ್ರಕಾರ ಗುರುವಿಗೆ, ದೈವಕ್ಕೆ, ಧರ್ಮಕ್ಕೆ, ದಾನಕ್ಕೆ ಮತ್ತು ಪರಮಪುರುಷಾರ್ಥಕ್ಕೆ ನೀಡದ ಸಂಪತ್ತು ವ್ಯರ್ಥ. ಈ ಭೂಮಿಯಲ್ಲಿ ಪರಮ ಉದಾರತೆ ಪೂಜಿಸಲ್ಪಡುತ್ತದೆ ಎಂದಿದ್ದಾರೆ ಕವಿ.

**ಇ–ವಿಭಾಗ**

**VIII. ಎರಡು ಮೂರು ವಾಕ್ಯಗಳ ಉತ್ತರ** **2*2=4**

48. ಊರಿನಲ್ಲಿ ಹಗಲಿರುಳು ನಿದ್ದೆ ಮಾಡುತ್ತಿದ್ದ ಬೆಟ್ಟಗಳಿದ್ದವು. ಊರ ಸುತ್ತಲು ತೆನೆಗಳಿಂದ ತೊನೆಯುತ್ತಿದ್ದ ಹಸಿರು ಗದ್ದೆಗಳಿದ್ದವು. ಸಾಲು ಮರದ ನೆರಳಿನಲ್ಲಿ ಹಾವಿನಂತಹ ಹಾದಿಯಿತ್ತು. ಊರು ತೆಂಗು, ಅಡಿಕೆ ಮರಗಳನ್ನು ತನ್ನ ಮಡಿಲಲ್ಲಿಟ್ಟುಕೊಂಡು ನಿಂತಿತ್ತು ಎಂದು ಕವಿ ಊರನ್ನು ವರ್ಣಿಸುತ್ತಾರೆ.

49. ಸೀರೆಯವರು ಹಸಿರು ಸೀರೆ, ನೀಲಿ ಸೀರೆ, ಜರಿಯ ಸೆರಗಿನ ಸೀರೆ, ಹಸೆಯ ಮೆರುಗಿನ ಸೀರೆಯನ್ನು ತಂದಿದ್ದನು.

50. ಕಥಾನಾಯಕಿ ನಾಗಿಯು ಬೆಕ್ಕಿನೊಂದಿಗೆ ಉಂಡು-ತಿಂದು ಅದರೊಂದಿಗೆ ನಲಿಯುತ್ತಿದ್ದಳು. ಹಾಲಿನಂಥ ಬಿಳಿಯ ಬೆಕ್ಕನ್ನು ಪ್ರೀತಿಯಿಂದ ಕರೆದಾಗ ಅದು ಮೆಲ್ಲನೆ ಎದ್ದು ಗಲ್ಲ ಮುಟ್ಟಿ ಅಲ್ಲಿ ಇಲ್ಲಿ ಬರುತ್ತಿತ್ತು.

## IX. ಸಂದರ್ಭ-ಸ್ವಾರಸ್ಯ — 1*3=3

51. ಪ್ರಸ್ತುತ ವಾಕ್ಯವನ್ನು ಸು.ರಂ.ಎಕ್ಕುಂಡಿಯವರು ಬರೆದ 'ಕಥನ ಕವನಗಳು' ಸಂಕಲನದಿಂದ ಆಯ್ದ 'ನಾಗಿಯ ಕಥೆ' ಎಂಬ ಕಥನ ಕಾವ್ಯದಿಂದ ಆರಿಸಲಾಗಿದೆ.

    ನಾಗಿಯ ಹೆಜ್ಜೆಗಳಲ್ಲಿ ಚೆಲುವು ಕಾಣಿಸಿಕೊಂಡಾಗ ಪ್ರೀತಿಯು ಗೇರು ಹೂವಿನಂತೆ ಅವಳ ಎದೆಗೆ ಲಗ್ಗೆ ಇಡುತ್ತದೆ. ಕೊಡವ ಹಿಡಿದು ನೀರಿಗೆ ಹೊರಟಾಗ ನೀರು ತುಂಬದೆ "ನಿಲ್ಲು ನಾಗಿ ನಿಲ್ಲು ನೋಡಬೇಕು ನಿನ್ನ" ಎಂದು ಹೇಳುತ್ತಿತ್ತಂತೆ.

    ನಾಗಿಯ ಸೌಂದರ್ಯ ಇಲ್ಲಿ ವರ್ಣಿಸಲ್ಪಟ್ಟಿದೆ. ಅವಳ ಸೌಂದರ್ಯವನ್ನು ನೋಡಲು ಎಲ್ಲರೂ ಹಂಬಲಿಸುತ್ತಿದ್ದರು ಎನ್ನುವುದನ್ನು ಕವಿ ಹೀಗೆ ವರ್ಣಿಸಿದ್ದಾರೆ.

52. ಪ್ರಸ್ತುತ ವಾಕ್ಯವನ್ನು ಸು.ರಂ.ಎಕ್ಕುಂಡಿಯವರು ಬರೆದ 'ಕಥನ ಕವನಗಳು' ಸಂಕಲನದಿಂದ ಆಯ್ದ 'ನಾಗಿಯ ಕಥೆ' ಎಂಬ ಕಥನ ಕಾವ್ಯದಿಂದ ಆರಿಸಲಾಗಿದೆ.

    ನಾಗಿ ತೇರನೆಳೆಯುವ ಸಂಭ್ರಮಕ್ಕೆ ಹೋದಾಗ ಅಲ್ಲಿ ಬಣ್ಣ ಬಣ್ಣದ ಸೀರೆಯೊಡನೆ ರೂಪವಂತನಾದ ಸೀರೆಯವನನ್ನು ನೋಡುತ್ತಾಳೆ. ಅವನ ನೋಟದಲ್ಲೇ ನಾಗಿಯಲ್ಲಿ ಪ್ರೀತಿ ಹುಟ್ಟಿಕೊಳ್ಳುತ್ತದೆ. ಅಂದಿನಿಂದ ನಾಗಿಯಲ್ಲಾದ ಬದಲಾವಣೆಯನ್ನು ಕವಿ ಇಲ್ಲಿ ಸೂಚಿಸುತ್ತಾರೆ.

    ನಾಗಿಯ ಎದೆಯಲ್ಲಿ ಹುಟ್ಟಿಕೊಂಡ ಪ್ರೀತಿಯನ್ನು ಕವಿ ಸು. ರಂ ಎಕ್ಕುಂಡಿಯವರು ಎದೆಯಲ್ಲಿ ಹೊತ್ತಿಸಿಟ್ಟ ಬಂಗಾರದ ದೀಪಕ್ಕೆ ಹೋಲಿಸಿದ್ದಾರೆ.

## X. ವಿವರವಾದ ಉತ್ತರ — 1*4=4

53. ಕಥಾನಾಯಕಿಯಾದ ನಾಗಿಯು ಇದ್ದಂತಹ ಊರಿನಲ್ಲಿ ತೇರನೆಳೆಯುವ ದೊಡ್ಡ ಸಂಭ್ರಮ. ಆ ದಿನ ನಾಗಿಯು ಬೇಗನೆ ಎದ್ದು ಸ್ನಾನ ಮಾಡಿ ಹಸಿರು ಸೀರೆ ಉಟ್ಟು ಇಂದ್ರಧನುವಿನಂತೆ ಹೊಳೆಯುವ ರವಿಕೆ ತೊಟ್ಟುಕೊಂಡಳು. ನಾಗಿಯು ಮಡಕೆ ತುಂಬ ಹಾಲು ಕರೆದು ತಾಯ ಕೈಗೆ ಕೊಟ್ಟು ತೇರನ್ನು ನೋಡಿ ಬರುವ ಬಾರೆ ಎಂದು ತಾಯಿಯನ್ನು ಕರೆದಳು.

    ತಾಯಿ ಮಗಳು ತೇರನ್ನು ನೋಡಲೆಂದು ಮನೆಯಿಂದ ಹೊರಟರು, ಆ ಸಂದರ್ಭದಲ್ಲಿ ಕೊಕ್ಕರೆಗಳು ಚುಂಚಿನಲ್ಲಿ ಚುಂಚನಿರಿಸಿ ನೀರಿಗಿಳಿದು ಆಡುತ್ತಿದ್ದವು, ಜಾತ್ರೆಗೆ ಹೋಗುವ ಸಂದರ್ಭದಲ್ಲಿ ತಾಯಿ ಮಗಳು ಅಲ್ಲೇ ಬೆಕ್ಕನ್ನು ಕಂಡು ಎತ್ತಿಕೊಂಡು ಮನೆಗೆ ಬಂದಳು.

54. ನಾಗಿಯ ಕಥೆಯಲ್ಲಿ ಪರಂಪರಾಗತ ನಿಯಮಗಳನ್ನು ದಾಟಿ ನಿಲ್ಲುವ ನಾಗಿ ಪ್ರಕೃತಿಪರ ಪ್ರೀತಿಯಲ್ಲಿ ತನ್ನ ಹಾದಿಯನ್ನು ಕಂಡುಕೊಳ್ಳುತ್ತಾಳೆ. ಬೆಕ್ಕು, ಹಾದಿ, ದಾರಿ ಇವುಗಳನ್ನು ಕವಿ ಸಾರ್ಥಕ ಸಂಕೇತಗಳಾಗಿ ಬಳಸುತ್ತಾನೆ. ನೀಲಿ ಹಸಿರು ಜರಿ ಸೀರೆಗಳ ಆಕರ್ಷಣೆಗೆ ಒಳಗಾಗಿದ್ದ ನಾಗಿ ಬಣ್ಣ ಬದುಕಿಗೆ ತನ್ನನ್ನ ತೆರೆದುಕೊಳ್ಳುತ್ತಾಳೆ. ಸೂಕ್ತವಾದ ನೆಲೆಗಳಲ್ಲಿ ಪ್ರೀತಿ ಹುಟ್ಟಿ ಯಾರಿಗೂ ಸುಳಿವು ಕೊಡದೆ ತನ್ನ ಸುಳಿಯಲ್ಲಿ ಸಿಲುಕಿಸಿಕೊಳ್ಳುತ್ತಾಳೆ. ಇಲ್ಲಿ ಬೆಕ್ಕು ವಿಶೇಷವಾಗಿ ಕಾಣುವ ಸಂಕೇತವಾಗಿದ್ದು ಕವಿ ಇದನ್ನು ಚಂಚಲ ಪ್ರೀತಿಗೆ ಸಂತೇತವನ್ನಾಗಿ ಮಾಡಿಕೊಂಡಿದ್ದಾರೆ.

### ಈ- ವಿಭಾಗ

## XI. ಎರಡು ಮೂರು ವಾಕ್ಯದ ಉತ್ತರ — 2*2=4

55. ಗುಡಿಗಳು ಪಾಪಿಗಳ ಮತ್ತು ಭೋಗಿಗಳ ಗೂಡುಗಳು ಎಂದು ತಿರುಕ ಹೇಳುತ್ತಾನೆ.

56. ರೈತನು ಶಿವನ ಗುಡಿಯಿಂದ ಹಣ್ಣು, ಕಾಯಿ, ಹೂವು, ಕರ್ಪೂರ, ಕುಂಕುಮಗಳನ್ನು ತಂದಿದ್ದಾನೆ.

57. ಚಂದ್ರ, ಗಂಗೆ, ಹಣೆಗಣ್ಣು, ಹಾವು, ಜನಿವಾರ, ಬೂದಿಗಳಿಲ್ಲದೆ ಶಿವನನ್ನು ಶಿವಗುಡಿಗೆ ಸೇರಿಸುವುದಿಲ್ಲ.

## XII. ಸಂದರ್ಭ-ಸ್ವಾರಸ್ಯ — 2*3=6

**58.** ಈ ವಾಕ್ಯವನ್ನು ಕುವೆಂಪುರವರ 'ಜಲಗಾರ' ಎಂಬ ನಾಟಕದಿಂದ ಆಯ್ದುಕೊಳ್ಳಲಾಗಿದೆ.

ಯುವಕನು ಜಲಗಾರನನ್ನು ಉದ್ದೇಶಿಸಿ ಈ ಮೇಲಿನ ಮಾತನ್ನು ಆಡುತ್ತಾನೆ.

ಜಾತ್ರೆಗೆ ತೆರಳುತ್ತಿರುವ ಯುವಕನು ಕಸಗುಡಿಸುತ್ತಿರುವ ಜಲಗಾರರನ್ನು ಉದ್ದೇಶಿಸಿ ಜಾತ್ರೆಯ ದಿನವು ಬಿಡುವಿಲ್ಲವೆ? ನಾಳೆ ಗುಡಿಸಿದರಾಯಿತು. ಈಗ ನನ್ನೊಂದಿಗೆ ಬಾ. ಒಂದು ದಿನವಾದರು ನಿನಗೆ ವಿಶ್ರಾಂತಿ ಇರಲಿ ಬಾ ಹೋಗೋಣ ಎಂದು ಒತ್ತಾಯಿಸುವ ಸಂದರ್ಭ ಇದಾಗಿದೆ.

ಯುವಕನು ಜಲಗಾರನಲ್ಲಿ ತೋರುವ ಸಹಾನುಭೂತಿ ಇಲ್ಲಿ ಮುಖ್ಯವಾದುದು.

**59.** ಈ ವಾಕ್ಯವನ್ನು ಕುವೆಂಪುರವರ 'ಜಲಗಾರ' ಎಂಬ ನಾಟಕದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಜಲಗಾರ ತಿರುಕನನ್ನು ಉದ್ದೇಶಿಸಿ ಹೇಳಿದ್ದಾನೆ.

ತರುಣರ ದೌರ್ಜನ್ಯಕ್ಕೆ ಒಳಗಾದ ತಿರುಕನನ್ನು ಸಂತೈಸಿದ ಜಲಗಾರನು ಮರುಕದಿಂದ ಆತನಿಗೆ ಏನು ಬೇಕಾಗಿದೆ ಎಂದು ವಿಚಾರಿಸಿಕೊಳ್ಳುತ್ತಾನೆ. ಆಗ ತಿರುಕನು ತಾನು ಹೊಟ್ಟೆಗಿಲ್ಲದೆ ಸಾಯುತ್ತಿರುವುದರಿಂದ ತುತ್ತು ಅನ್ನ ಬೇಕಾಗಿದೆ ಎನ್ನುತ್ತಾನೆ. ಆಗ ಜಲಗಾರನು ಅವನನ್ನು ಸಂತೈಸುತ್ತ ಬಡವರಿಗೆ ಬಡವರಲ್ಲದೆ ಬೇರೆ ಗತಿ ಇಲ್ಲವೆಂದು ಹೇಳಿ ತಾನು ಅವನ ನೆರವಿಗೆ ಬರುತ್ತಾನೆ.

ಜಲಗಾರನ ಕರುಣೆ, ಮಮತೆ, ಸಹಾನುಭೂತಿ ಇಲ್ಲಿ ಅನಾವರಣಗೊಂಡಿದೆ.

**60.** ಈ ವಾಕ್ಯವನ್ನು ಕುವೆಂಪುರವರ 'ಜಲಗಾರ' ಎಂಬ ನಾಟಕದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಶಿವನು ಜಲಗಾರನೆದುರು ಹೇಳಿದನು.

ಶಿವನು ಶಿವಗುಡಿಯ ಪೀಠದಲ್ಲಿ ಎಂದೆಂದಿಗೂ ತಾನು ಇಲ್ಲವೆಂದು ಹೇಳಿದಾಗ, ಜಲಗಾರನು ಹೇ ದೇವ ನೀನು ಮತ್ತೆಲ್ಲಿ ಇರುವೆ ಎಂದು ಪ್ರಶ್ನಿಸುತ್ತಾನೆ. ಆಗ ಶಿವನು ಈ ಮೇಲಿನ ಮಾತುಗಳನ್ನು ಹೇಳುತ್ತಾನೆ.

ಶಿವನು ತಾನು ಕರ್ಮಯೋಗಿಗಳ ಎದೆಯಲ್ಲಿ, ಬೀದಿ ಗುಡಿಸುವ ಬಡವನೆದೆಯಲ್ಲಿ, ಉಳುಮೆ ಮಾಡುವ ಒಕ್ಕಲಿಗನ ಎದೆಯಲ್ಲಿ, ಹೊಲೆಯನ ಕಾಯಕದಲ್ಲಿ, ಅನಾಥರನ್ನು ಕಾಯುವವರ ಜೊತೆ ತಾನು ಸದಾ ಇರುತ್ತೇನೆ ಎಂದು ಶಿವನು ಹೇಳುತ್ತಾನೆ.

## XIII. ವಿವರವಾದ ಉತ್ತರ **1*4=4**

**61.** ಜಲಗಾರನು ತನ್ನ ಶಿವ ಹಾಗೂ ತನ್ನ ಪೂಜೆಯನ್ನು ಕುರಿತು ಹೇಳುವ ಮಾತುಗಳು ಸ್ವಾರಸ್ಯಕರವಾಗಿವೆ, ಆತನ ಶಿವ ಮಣ್ಣಿನಲ್ಲಿರುವನು. ಆತನ ಶಿವನು ಕೊಳೆತ ಕಸದೊಳಗಿರುವನು. ಆತನ ಶಿವ ಕರ್ಪೂರ, ಮಂಗಳಾರತಿ, ಹೂವುಗಳಲ್ಲಿ ಇಲ್ಲ. ಅವನ ಪ್ರಕಾರ ಶಿವನು ಗುಡಿಯೊಳಗಿಲ್ಲ ಬದಲಿಗೆ ಜಲಗಾರನ ಎದೆಯೇ ಶಿವನ ಗುಡಿಯಾಗಿದೆ. ಎಲ್ಲಿ ಜಲಗಾರನಿರುವನೋ ಅಲ್ಲಿ ಶಿವನಿದ್ದಾನೆ. ಅವನ ಒಲುಮೆಯೇ ಶಿವಪೂಜೆಯಾಗಿದೆ. ಎಲ್ಲಿ ತಾನು ಭಕ್ತಿಯಿಂದ ಕೈಮುಗಿಯುವನೋ ಅಲ್ಲೇ ಶಿವನಿದ್ದಾನೆಂದು ಜಲಗಾರ ವಿವರಿಸುತ್ತಾನೆ. ತಾನು ಮಾಡುವ ಒಳ್ಳೆಯ ಕೆಲಸಗಳಲ್ಲಿ ಶಿವ ಮೈದೋರುತ್ತಾನೆ ಎಂದು ಜಲಗಾರ ಹೇಳುತ್ತಾನೆ. ಆತನ ಕರ್ಮವೇ ಆರಾಧನೆಯಾಗಿದೆ. ಸೇವೆಯೇ ಶಿವಪೂಜೆಯಾಗಿದೆ. ಜಲಗಾರನ ಪೊರಕೆಯೇ ಆತನ ಪಾಲಿನ ಆರತಿ, ಗುಡಿಸುವುದೇ ಜಲಗಾರನ ಪೂಜೆಯಾಗಿದೆ.

**62.** ಕುವೆಂಪುರವರ ಜಲಗಾರ ನಾಟಕವು ಪ್ರಕಾರ ವೈಚಾರಿಕತೆಯಿಂದ ಕೂಡಿದ ಕೃತಿಯಾಗಿದೆ. ಸಮಾಜದ ಜನರಲ್ಲಿ ಜಾತಿ–ಕುಲಗಳಲ್ಲಿ ತಾರತಮ್ಯ, ಶ್ರೀಮಂತ ಬಡವರ ನಡುವಿನ ಅಸಮಾನತೆ, ಪೂಜೆ, ದೇವರುಗಳ ವಿಚಾರದಲ್ಲಿ ಹೇರಿರುವ ಮೌಢ್ಯ ಮತ್ತು ಅಂಧ ಶ್ರದ್ಧೆಯನ್ನು ಜಲಗಾರ ನಾಟಕವು ಬೆರಳು ಮಾಡಿ ತೋರಿಸಿದೆ. ಜಲಗಾರನ ಮೂಲಕ ಮಾಡುವ ಕೆಲಸದಲ್ಲಿ ದೇವರನ್ನು ಕಾಣಬೇಕೆಂಬ ವಿಚಾರವನ್ನು ನಾಟಕಕಾರರು ತೋರಿದ್ದಾರೆ. ಶಿವನನ್ನು ಶಾಸ್ತ್ರಿಗಳು ಕಾಣುವ ರೀತಿಗೂ, ಜಲಗಾರ ಭಾವಿಸುವ ರೀತಿಗೂ ಇರುವ ಅಂತರ ಬಹುಮುಖ್ಯವಾದುದು ಎಲ್ಲರೂ ಶಿವನನ್ನು ಗುಡಿಯಲ್ಲಿ ಅರಸಿದರೆ, ಜಲಗಾರ ಮಾತ್ರ ಶಿವನನ್ನು ಧೂಳಿನಲ್ಲಿ ಕಾಣುತ್ತಾನೆ. ಬ್ರಾಹ್ಮಣರು, ರೈತರು, ತರುಣರಲ್ಲಿ ರೂಢಿಗತವಾದ ಅಂಧ ಶ್ರದ್ಧೆ ಕಂಡುಬಂದರೆ, ಅವಿದ್ಯಾವಂತರು ಬಡವನು ಆದ ಜಲಗಾರನಲ್ಲಿ

ವೈಚಾರಿಕ ಪ್ರಜ್ಞೆ ಇರುವುದನ್ನು ಅರಿಯಬಹುದು. ತಿರುಕನ ಮೂಲಕ ನಾಟಕಗಾರರು ದೇವಾಲಯವೆಂದರೆ ಪಾಪಿಗಳು – ಭೋಗಿಗಳ ಗೂಡು ಎಂದು ಹೇಳಿಸುವ ಧೈರ್ಯ ಮಾಡಿದ್ದಾರೆ.

**ಉ–ವಿಭಾಗ**

**XIV. ಟಿಪ್ಪಣಿ** **2*2=4**

**63.** ಚಂಪೂ– ಬರೆಯುವ ಶೈಲಿಗೆ ಸಂಬಂಧಿಸಿದ ಪರಿಭಾಷೆ. ಪದ್ಯ–ಗದ್ಯ ಮಿಶ್ರಿತ ಶೈಲಿ. ಪದ್ಯಗಳಲ್ಲಿ ಪ್ರಧಾನವಾಗಿ ಕಂದಪದ್ಯ ಮತ್ತು ವೃತ್ತಗಳು ಕಾಣಸಿಗುತ್ತವೆ.

**64.** ಅಲ್ಲಮ–ಈತ ಹನ್ನೆರಡನೇ ಶತಮಾನದ ಪ್ರಸಿದ್ಧ ವಚನಕಾರ. ಜನನ ಬಳ್ಳಿಗಾವೆ. ಈತ ಮಧುಕೇಶ್ವರನ ಪರಮಭಕ್ತ. ಬಸವಣ್ಣನ ಅನುಭವ ಮಂಟಪದ ಶೂನ್ಯ ಸಿಂಹಾಸನದ ಅಧಿಪತಿ. ಈತನ ವಚನಗಳು ವೈಚಾರಿಕತೆಯಿಂದ ಕೂಡಿವೆ.

**65.** ಚಿಕ್ಕುಪಾಧ್ಯಾಯ–ಕಾಲ ಸುಮಾರು 1670. ತೆರಕಣಾಂಬಿಯಲ್ಲಿ ಜನನ. ಸಾಂಗತ್ಯಗಳನ್ನು ರಚಿಸಿದ್ದಾನೆ. ರಂಗಧಾಮ ನೀತಿಶತಕ ಸಾಂಗತ್ಯ ಕೃತಿಯ ಕರ್ತೃ.

**ಊ–ವಿಭಾಗ**

**XV. ಛಂದಸ್ಸು** **1*4=4**

**66.**

```
_ UU  _ UU  _ _
ಅಂಬರ ಭೂಷಣ ಮಾಲಾ
_ UU  UU _  UUUU  _ UU  UU _
ಡಂಬರ ಧಬೆಡಂ ಗನಮರ ನರ್ತಕಿ ಗಡಮೇ
_ UU  UU _  _ UU
ನೆಂಬುದೊ ಧರಣೇಂ ದ್ರಂಗಮ
_ _  UU _  U _ U  _ _  UU _
ಘುಂಬಂ ಪೊಗಳ ಲ್ಕರೂಪು ನೀಳಾಂ ಜನೆಯಾ
```

**–ಕಂದಪದ್ಯ**

**67.**

```
UU_  _ _  _ _  UUUU
ಶಿವನಂ ಕಂಡಾ ಭಕ್ತಂ ಕುಣಿಯಲು
UU_  UU _  UU _  UUUU
ಶಿವಭ ಕ್ತನಕೂ ಡಭವಂ ಕುಣಿಯಲು
```

**–ಮಂದಾನಿಲ ರಗಳೆ**

**XVI. ಅಲಂಕಾರ** **1*4=4**

**68. ಉಪಮಾಲಂಕಾರ**

ಉಪಮೇಯ–ನೀಲಾಂಜನೆ

ಉಪಮಾನ– ಮದನನ ಹೂಬಾಣ

ಉಪಮವಾಚಕ– ಅಂತೆ

ಸಮಾನಧರ್ಮ–ಪ್ರವೇಶಿಸುವುದು

**69. ಛೇಕಾನುಪ್ರಾಸ**

ಇಲ್ಲಿ ಹಾಡಿ ಹಾಡಿ ಮತ್ತು ಉಗುಳಿ ಉಗುಳಿ ಎನ್ನುವ ಎರಡು ವ್ಯಂಜನಾಕ್ಷರಗಳ ಪದಗಳು ಪದ್ಯದ ಸಾಲಿನಲ್ಲಿ ಎರಡೆರಡು ಬಾರಿ ಪುನರಾವರ್ತನೆಗೊಂಡಿರುವುದರಿಂದ ಇದು ಛೇಕಾನುಪ್ರಾಸ.

**XVII. ಹೊಸಗನ್ನಡಕ್ಕೆ ಅನುವಾದ** **1*4=4**

**70.** ಮರಳಲಿಂಗದ ಶಿರದ ಮೇಲಿನ ಪುಷ್ಪಮಂಜರಿ ನಿಲ್ಲದೇ ಆ ಕ್ಷಣದಲ್ಲಿಯೇ ಕಿರಾತನ ಮಂಡೆಯಲ್ಲಿರುವುದನ್ನು ಕಂಡು ಕಾರಣವಿದೇನು ಹೊಸತೆಂದು ಅದ್ಭುತಸಹಿತ ಮನಸ್ಸಿನವನಾದ ಅರ್ಜುನನು ಲಿಂಗದ ಶೂನ್ಯ ಶಿರಸ್ಸನ್ನು ಮರಳಿ ವೀಕ್ಷಿಸಿದನು.